# <u>ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ, ಧಾರವಾಡ</u>

## <u>ಸಿಸಿ ನಂ.**2226/2022**</u>

ಪಿರ್ಯಾದುದಾರರುಃ ಪಿ ಎಸ್ ಐ , ಗ್ರಾಮೀಣ ಪೋಲಿಸ ಠಾಣೆ, ಧಾರವಾಡ.

ವಿರುದ್ಧ

ಆರೋಪಿತರುಃ 1. ಮಲ್ಲಿಕಜಾನ ರಸೂಲ್ ಸಾಬ ಶೇಖ
ವಯಾಃ 41 ವರ್ಷ ಉಃ ವ್ಯಾಪಾರ
ಸಾಃ ಧಾರವಾಡ

**<u>-ಃ ಆಪಾದನೆ ಃ-</u>**

ದಿಃ 26.05.2024 ರಂದು 19.00 ಗಂಟೆಯ ಸುಮಾರಿಗೆ ಧಾರವಾಡ ಗ್ರಾಮೀಣ ಪೋಲೀಸ ಠಾಣೆ ಸರ ಹದ್ದಿಯ ಪೈಕಿ ಧಾರವಾಡ ನವಲಗುಂದ ರಸ್ತೆಯ ಮೇಲೆ ಗೋವನಕೊಪ್ಪ ಸಮೀಪ ಇರುವ ನಲವಡಿ ಹೈಸ್ಕೂಲ್ ಹತ್ತಿರ 1 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ಮೋಟರ ಸೈಕಲ್ ನಂ.ಕೆಎ.25/ಹೆಚ್.ಜಿ-2997 ನೇದ್ದನ್ನು ಸೋಮಾಪೂರ ಕಡೆಯಿಂದ ಧಾರವಾಡ ಕಡೆಗೆ ಅತೀ ವೇಗ ಹಾಗೂ ನಿಕ್ಷಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ರೋಡ ಹಂಪ್ಸನ್ನು ಜಿಗಿಸಿ ಮೋಟರ ಸೈಕಲ್ ನ ವೇಗ ನಿಯಂತ್ರಣ ಮಾಡಲಾಗದೇ ಸ್ಕಿಡ್ ಮಾಡಿ ಕೆಡವಿ ಅಪಘಾತಮಾಡಿದ್ದು ಭಾರತೀಯ ದಂಡ ಸಂಹಿತೆ ಕಲಂ.**279** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಕೊನೇಯದಾಗಿ , ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ಸದರಿ ಅಪಘಾತದಲ್ಲಿ ನಿಮಗೆ ತಿವ್ರ ಸ್ವರೂಪದ ಗಾಯಪಡಿಸಿಕೊಂಡಿದ್ದು ಅಲ್ಲದೇ ನಿಮ್ಮ ಮೋಟರ ಸೈಕಲ್ ನ ಹಿಂದೇ ಕುಳಿತಿದ್ದ ಸಯ್ಯದ ಮೆಹಮೂದ ನಾಲಬಂದ ರವರಿಗೆ ತೀವ್ರ ಸ್ವರೂಪದ ಗಾಯಪಡಿಸಿ ಮೃತ ಪಡುವಂತೆ ಮಾಡಿದ್ದು, ಭಾರತೀಯ ದಂಡ ಸಂಹಿತೆ ಕಲಂ.**338** ಮತ್ತು **304** ಎ ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಪ್ರಶ್ನೇಃ- ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ ?
ಉತ್ತರಃ-
ಪ್ರಶ್ನೆಃ ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ ?
ಉತ್ತರಃ

**(** ಸದರಿ ಆಪಾದನೆಯನ್ನು **1** ನೇ ಆರೋಪಿಗೆ ಓದಿ ತಿಳಿಸಿ**,** ಅವರು ಕೊಟ್ಟ ಸಂಪೂರ್ಣ ಹಾಗೂ ಸರಿಯಾದ ಉತ್ತರವನ್ನು ಅಭಿಲೇಖಿಸಿಕೊಳ್ಳಲಾಗಿದೆ**.)**

ದಿನಾಂಕ 06.10.2025.
ಧಾರವಾಡ.

4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ